ಶಾಸಕರ ನಿಧಿಯಿಂದ ದೇವಸ್ಥಾನ ಹಾಗೂ ಕಲ್ಯಾಣ ಮಂಟಪದ ನಿರ್ಮಾಣಕ್ಕೆ ಹಣ ಮಂಜೂರು ಮಾಡಲಿದ್ದಾರೆಂದು ವರದಿಯಲ್ಲಿ ಬಾಕ್ಸ್ ಐಟೆಮ್ಮಾಗಿ ಪ್ರಕಟಿಸಿದ್ದ. ಅಂದಾನಪ್ಪ ಗೌಡರು ವರದಿ ಓದಿ ಧೀರೇಂದ್ರ ಗೌಡ ಮತ್ತು ಮಲಕಾಣಿಯನ್ನು ಕಲಬುರಗಿಯ ಓಕಳಿ ಕ್ಯಾಂಪ್‌ನಲ್ಲಿದ್ದ ತಮ್ಮ ಮನೆಗೆ ಬರ ಮಾಡಿಕೊಂಡು ಮುಂದುವರಿಯುವಂತೆ ಹಸಿರು ನಿಶಾನೆ ತೋರಿಸಿದ್ದರು. ಸಾಧ್ಯವಾದರೆ ಇನ್ನೊಂದು ಎಕರೆ ಜಮೀನು ಮಸೀದಿ ನಿರ್ಮಾಣಕ್ಕೆ ಬರೆದು ಕೊಡುವಂತೆ ಬಸವರಾಜಪ್ಪನ ಮೇಲೆ ಒತ್ತಡ ಹಾಕಿ ಎಂದಿದ್ದರು. ಸಾಹೇಬರು ಬರುವ ಚುನಾವಣೆ ನಜರನಲ್ಲಿಟ್ಟುಕೊಂಡು ದೇವಸ್ಥಾನ ಮತ್ತು ಮಸೀದಿ ಕಟ್ಟಿಸಲು ಸ್ವತಃ ತಾವೇ ಅಖಾಡಕ್ಕೆ ಇಳಿಯುತ್ತಿರುವಂತೆ ಧೀರೇಂದ್ರ ಗೌಡನಿಗೆ ಭಾಸವಾಯಿತು. ಊರಿಗೆ ಮರಳಿದ ಮಲಕಾಣಿ ರಾತ್ರೋರಾತ್ರಿ ನಜೀರ ಸಾಬರ ಮನೆಗೆ ಭೇಟಿಕೊಟ್ಟು ಅಂದಾನಪ್ಪ ಗೌಡರ ವಿಚಾರವನ್ನು ಸಾಧ್ಯಂತವಾಗಿ ವಿವರಿಸಿದ. ವಿಷಯ ತಿಳಿದದ್ದೇ ನಜೀರ ಸಾಬರು ತಮ್ಮ ಪಟಾಲಂ ಕಟ್ಟಿಕೊಂಡು ಬಸವರಾಜಪ್ಪನನ್ನು ಕಂಡು ಮಸೀದಿ ನಿರ್ಮಾಣಕ್ಕಾಗಿ ಒಂದು ಎಕರೆ ಜಮೀನಿನ ಬೇಡಿಕೆ ಮುಂದಿಟ್ಟರು.



* * *

ದೇವಸ್ಥಾನ ನಿರ್ಮಾಣದ ಕುರಿತು ಚರ್ಚಿಸಲು ಮಠದ ಅಪಗೊಳ ನೇತೃತ್ವದಲ್ಲಿ ಧೀರೇಂದ್ರ ಗೌಡನ ಮನೆಯಲ್ಲಿ ಊರ ಮುಖಂಡರ ಸಭೆ ಕರೆಯಲಾಗಿತ್ತು. ಬಸವರಾಜಪ್ಪನೂ ಸಭೆಗೆ ಹಾಜರಾಗಿದ್ದ. 'ಬಸವರಾಜಪ್ಪ ಊರದೇವರ ಸೇವಾ ಅಂದರ ಅದೇನು ಸಣ್ಣ ಮಾತಲ್ಲ. ಈ ಭಾಗ್ಯ ನಿನಗ ಸಿಗಬೇಕಂದರ ಅದು ನಿನ್ನ ಪೂರ್ವಜನ್ಮದ ಪುಣ್ಯ ಅಂತ ಕಾಣತದ. ಹೊಲ, ಮನಿ, ಸಂಸಾರ ಅನ್ನೋದೆಲ್ಲ ಲೌಕಿಕದ ಮಾತು. ಇಹಲೋಕದಾಗ ಒಳ್ಳೆಯ ಕೆಲಸ ಮಾಡಿದರ ಪರಲೋಕದಾಗ ಸದ್ಗತಿ ದೊರಿತದ. ದೇವರ ಆರ್ಶೀವಾದ ಒಂದು ತಲಿ ಮ್ಯಾಲಿದ್ದರ ಇಂಥ ನೂರು ಎಕರೆ ನಿಂದಾಗಬಹುದು. ದೇವರ ಸೇವಾ ಅಂತ ಹಿಂದಮುಂದ ವಿಚಾರ ಮಾಡದೆ ಒಪ್ಪಿಕೊಂಡು ಬಿಡು. ಗುಡಿ, ಕಲ್ಯಾಣಮಂಟಪ ಕಟ್ಟಿಸಿದರ ಊರು ಅಭಿವೃದ್ಧಿ ಕಾಣತದ' ಎಂದು ಅಪಗೊಳು ಅಧ್ಯಾತ್ಮದ ಜೊತೆಗೆ ವ್ಯವಹಾರಿಕ ಮಾತನಾಡಿ ಮನವೊಲಿಸಲು ನೋಡಿದರು. ಬಸವರಾಜಪ್ಪ ತಲೆ ಎತ್ತಿ ಅಪಗೊಳ ಮುಖ ನೋಡಿದ. ಆ ಮುಖದಲ್ಲಿ ಕುಣಿಯುತ್ತಿದ್ದ ಅರಿಷಡ್ವರ್ಗಗಳು ಕಣ್ಣಿಗೆ ರಾಚಿದಂತಾಗಿ ಅಪಗೊಳ ಬಗ್ಗೆ ಹೇಸಿಗೆ ಎನಿಸಿತು. ಅಪಗೊಳೇನೂ ನೀತಿವಂತರಾಗಿರಲಿಲ್ಲ. ಅವರ ಕಚ್ಚೆ ಬಿಗಿಯಿಲ್ಲ ಅನ್ನೋದು ಇಡೀ ಊರಿಗೇ ತಿಳಿದಿತ್ತು. ಆಗಾಗ ಪ್ರವಚನದ ನೆಪ ಮಾಡಿಕೊಂಡು ಸೋಲಾಪುರ, ಮುಂಬೈಗೆ ಹೋಗಿ ಮೈಭಾರ ಹಗುರಾಗಿಸುತ್ತಿದ್ದದ್ದು ಗುಟ್ಟಾಗೇನೂ ಉಳಿದಿರಲಿಲ್ಲ. 'ಶಾಲೆ, ಆಸ್ಪತ್ರೆ ಕಟ್ಟಿಸ್ತೀವಿ ಅಂದರ ಜಮೀನು ಕೊಡಬಹುದಿತ್ತು. ಈ ಗುಡಿ- ಗುಂಡಾರದ ಮ್ಯಾಲ ನನಗ ನಂಬಿಕೆ ಇಲ್ಲ. ನೀವು ಕೇಳಲಿಕತ್ತಿರಂತ ಮಸೀದಿಗೂ ಜಾಗ ಬೇಕಂತ ಅವರು ಕೇಳಲಿಕತ್ತಾರ. ನನ್ನ ಹೊಲ ಅಂದರ ಯಾರದೋ ರೊಕ್ಕ ಎಲ್ಲಮ್ಮನ ಜಾತ್ರಿ ಆದಂಗ ಆಗ್ಯಾದ. ಬಿಸಿಲಾಗ ನಿಂತ ಮಲಕಣ್ಣಪ್ಪ ಮತ್ತ ಪೀರದೇವರು ಇಬ್ಬರೂ ಕೂಡಿ ಎದ್ದು ಬಂದು ಕೇಳಿದರೂ ಒಂದಿಂಚು ಜಾಗ ಕೊಡೊಲ್ಲ' ಎಂದು ದುರ್ದಾನ ತೆಗೆದುಕೊಂಡವನಂತೆ ಸಭೆಯ ಮಧ್ಯದಲ್ಲೇ ಎದ್ದು ಬಸವರಾಜಪ್ಪ ಹೊರ ನಡೆದ. ಬಸವರಾಜಪ್ಪನ ಮಾತು ಕೇಳಿ ಹಾಲಿನಂತೆ ಬೆಳ್ಳಗಿದ್ದ ಅಪಗೊಳ ಮುಖ ಕಪ್ಪಿಟ್ಟಿತು. 'ಸಾಮ, ದಾನ, ದಂಡ, ಭೇದ ಪ್ರಯೋಗಿಸಿ ನೋಡಿ. ಕೊನಿಗಿ ಬಹಿಷ್ಕಾರ ಅಂತೂ ಇದ್ದದ್ದೇ' ಎಂದು ಅಪಗೊಳು ತಮ್ಮ ತೀರ್ಮಾನ ಪ್ರಕಟಿಸಿದರು. ಸಭೆಯಲ್ಲಿನ ಎಲ್ಲರೂ ಅಪಗೊಳ ನಿರ್ಧಾರವನ್ನು ಒಕ್ಕೊರಳಿನಿಂದ ಅನುಮೋದಿಸಿದರು. ಚುರುಮುರಿ ವಗ್ಗರಣೆ ಮತ್ತು ಚಹಾ ಸೇವನೆಯ ನಂತರ ಸಭೆ ಬರ್ಖಾಸ್ತುಗೊಂಡಿತು.

ಈ ಎಲ್ಲ ವಿದ್ಯಮಾನ ನಡೆಯುತ್ತಿರುವ ಹೊತ್ತಿನಲ್ಲೇ ಕಲಬುರಗಿಯಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡಿಕೊಂಡಿದ್ದ ರಿಯಾಜ್ ಅಹ್ಮದ್